**CC No. 4105/2025 PW- 1**

**ಸಾಕ್ಷಿಯನ್ನು ದಿನಾಂಕಃ** 02-04-2026 **ರಂದು ಪ್ರಮಾಣೀಕರಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.**
**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಎಸ್. ವಕೀಲರಿಂದಃ**

1. ನಾನು ಮೆಟಿರಿಯಲ್ ಸಪ್ಲೇ ಮಾಡಿ 30 ದಿನಗಳ ಒಳಗೆ ಆರೋಪಿ ಹಣ ಕೊಡುತ್ತಾರೆ. ನಮ್ಮ ವ್ಯವಹಾರದಲ್ಲಿ ಮೆಟಿರಿಯಲ್ ಪಡೆದುಕೊಂಡು ಹಣ ಕೊಡದೇ ಇದ್ದಲ್ಲಿ ನಷ್ಟವಾಗುತ್ತದೆಂದು ಮೆಟಿರಿಯಲ್ ಸಪ್ಲೇ ಮಾಡುವಾಗಲೇ ಭದ್ರತೆಗೆಂದು ಚೆಕ್ಕುಗಳನ್ನು ತೆಗೆದುಕೊಳ್ಳುತ್ತೇವೆ ಎಂದರೆ ಸರಿ. ಆರೋಪಿತರು ಈ ಮೊದಲು ಹಣವನ್ನು ನನ್ನ ಕೆನರಾ ಬ್ಯಾಂಕಿನ ಖಾತೆಗೆ ಹಾಕುತ್ತಿದ್ದರು. ನನ್ನ ಪತ್ನಿಯ ಹೆಸರಿನಲ್ಲಿ ಮೂನ್ ಪವರ್ ನ ಹೆಸರಿನಲ್ಲಿ ಯಾವುದೇ ಖಾತೆ ಇಲ್ಲ. ಈ ವ್ಯವಹಾರದಲ್ಲಿ ಆರೋಪಿಯು ನನ್ನ ಪತ್ನಿಯ ಖಾತೆಗೆ ಯಾವತ್ತು ಹಣ ಹಾಕಿಲ್ಲ. ಮೆಟಿರಿಯಲ್ ಸಪ್ಲೇ ಮಾಡುವಾಗ ಹಣ ಕೊಡಲು ಸ್ವಲ್ಪ ಸಮಯ ಬೇಕು ಎಂದು ಆರೋಪಿ ನನ್ನನ್ನು ಕೇಳಿಕೊಂಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ನುಡಿಯುತ್ತಾರೆ ಆರೋಪಿಯು ಪ್ರಕರಣ ದಾಖಲು ಮಾಡಿಕೊಳ್ಳಿ ನಾನು ನ್ಯಾಯಾಲಯದಲ್ಲಿ ನೋಡಿಕೊಳ್ಳುತ್ತೇನೆ ಎಂದು ಹೇಳಿದ್ದರು.

2. 08.10.2024 ರಂದು ಆರೋಪಿ ಇಂದ ನಮ್ಮ ಫರ್ಮ ನ ಖಾತೆಗೆ ರೂ. 1,04,000/- ಬಂದಿದೆ ಎಂದರೆ ಪರಿಶೀಲಿಸಬೇಕು. ಆರೋಪಿಯು ಸದರಿ ಹಣವನ್ನು ಕೊಟ್ಟಿದ್ದರೂ ಸಹ ಮತ್ತು ಉಳಿದ ಹಣವನ್ನು ಕೊಡಲು ತಯಾರಿದ್ದರೂ ಸಹ, ಪೂರ್ತಿ ಇನ್ ವಾಯಿಸ್ ಮೊತ್ತಕ್ಕೆ ಭದ್ರತೆಯ ಚೆಕ್ಕನ್ನು ಬ್ಯಾಂಕಿಗೆ ಹಾಕಿ ಸುಳ್ಳು ಪ್ರಕರಣ ಮಾಡಿದ್ದೇನೆ ಎಂದರೆ ಸರಿಯಲ್ಲ, ಆರೋಪಿಯೇ ಚೆಕ್ಕಿನಲ್ಲಿ ಹಣ ನಮೂದಿಸಿ ಕೊಟ್ಟಿರುತ್ತಾರೆ. ಸದರಿ ರೂ. 1,04,000/- ನನ್ನ ಖಾತೆಗೆ ಬಂದಿದೆಯೋ ಇಲ್ಲವೊ ಎಂದು ಅದಕ್ಕೆ ಸೂಕ್ತ ದಾಖಲಾತಿಯನ್ನು ನ್ಯಾಯಾಲಯಕ್ಕೆ ಒದಗಿಸಲು

ನನಗೆ ತೊಂದರೆ ಇಲ್ಲ ಎಂದರೆ ಸರಿ. ಆರೋಪಿಗೆ ನಾನು ಕೊಟ್ಟಿರುವ ಲೀಗಲ್ ನೋಟಿಸು ತಲುಪಿಲ್ಲ, ಆದ್ದರಿಂದ ಅವರು ಪ್ರತ್ಯುತ್ತರ ಕೊಟ್ಟಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇದೆ**

16**ನೇ ಅಪರ ಮು ಮ ದಂ ಬೆಂ ನಗರ**.